# IN THE COURT OF THE ADDL. SENIOR CIVIL JUDGE & JMFC., GUBBI

# OS – 40/2024

Witness present and duly sworn on : 16.09.2025.

Cross Examination: by Counsel for Plaintiffs :

ಸರ್ವೆ ನಂ.57 ರ ಒಟ್ಟು ವಿಸ್ತೀರ್ಣ 18 ಎಕರೆ 25 ಗುಂಟೆ ಎಂದರೆ ಸರಿ. ಸರ್ವೆ ನಂ.56 ರ ಒಟ್ಟು ವಿಸ್ತೀರ್ಣ 11 ಎಕರೆ 35 ಗುಂಟೆ ಎಂದರೆ ಸರಿ. ಸರ್ವೆ ನಂ.85 ರ ಒಟ್ಟು ವಿಸ್ತೀರ್ಣ 2 ಎಕರೆ 6 ಗುಂಟೆ ಎಂದರೆ 2 ಎಕರೆ ಇರುತ್ತದೆ. ಸದರಿ ಜಮೀನುಗಳು ನಾಗೇಶ್ವರ್ ಶಾಸ್ತ್ರಿ ರವರಿಗೆ ಸೇರಿದ್ದವು ಎಂದರೆ ಸರಿ.

ಸರ್ವೆ ನಂ.40 ರ 4 ಎಕರೆ 32 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಖಾನೇಶುಮಾರಿ ನಂ.69 ರಲ್ಲಿ ಖಾಲಿ ಜಾಗ ಮತ್ತು ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.40 ಮತ್ತು ಖಾನೆಶುಮಾರಿ ನಂ.69 ಲಕ್ಷಮ್ಮರವರಿಗೆ ಸೇರಿದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ದಿನಾಂಕಃ 01.08.1924 ರಂದು ಸದರಿ ಲಕ್ಷ್ಮಮ್ಮ ಮತ್ತು ಆಕೆಯ ಮಕ್ಕಳಾದ ಅಂಜನಿ ಹಾಗೂ ಲಕ್ಷ್ಮಮ್ಮ ನವರು ಅಲ್ಪ ವಯಸ್ಕರಾಗಿದ ಸಂಜೀವಯ್ಯ ರವರು ಮರಿಗಂಗಯ್ಯ ರವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳಲ್ಲಿ ಮರಿಗಂಗಯ್ಯ ಮತ್ತು ಅವರ ಹೆಂಡತಿ ರೇವಮ್ಮ ಸ್ವಾಧೀನದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಿಗಂಗಯ್ಯ 1 ರಿಂದ 4 ನೇ ವಾದಿಗಳಾದ ಶಿವಗಂಗಮ್ಮ, ಶಿವಗಂಗಯ್ಯ, ಬಸವರಾಜು ಮತ್ತು ಶಿವಕುಮಾರ್ ರವರ ತಾತ ಎಂದರೆ ಸರಿ. ದಿನಾಂಕಃ 16.07.1937 ರಂದು ಸದರಿ ಜಮೀನುಗಳನ್ನು ನಾಗೇಶ್ವರ್ ಶಾಸ್ತ್ರೀ ರವರಿಗೆ ಕೊಟ್ಟು ದಾವಾ ಆಸ್ತಿಗಳನ್ನು ಪಡೆದು ಅದಲು ಬದಲು ಪತ್ರ ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಅದಲು ಬದಲು ದಾಖಲೆ ಆದ ನಂತರ ದಾವಾ ಆಸ್ತಿಗಳ ಖಾತೆ ಪಹಣಿಯು ಮರಿಗಂಗಯ್ಯ ರವರ ಹೆಸರಿಗೆ ಬಂದವು ಎಂದರೆ ನನಗೆ ಗೊತ್ತಿಲ್ಲ. ಮರಿಗಂಗಯ್ಯ ಜೀವಿತ ಅವಧಿಯಲ್ಲಿ ಅವರು ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಮರಿಗಂಗಯ್ಯ ನವರ ಜೀವಿತ

ಅವಧಿಯಲ್ಲಿ ಅವರು ದಾವಾ ಆಸ್ತಿಗಳಿಗೆ ಸಂಭಂದಿಸಿದಂತೆ ಅವರು ಯಾವುದೇ ವ್ಯವಹಾರಗಳನ್ನು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

(Further cross examination deferred at the request of counsel for the plaintiffs)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi